ಸೈನ್ಯಕರ್‌ಗಳು ಈ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ ಎಂದು ಹೇಳುತ್ತೇನೆ. ಅದಕ್ಕೆ ಸಂಬಂಧ ಪಟ್ಟಿಂಥಾ ಬೆನಿಫಿಟ್ಸ್, ಟ್ರಾನ್ಸ್‌ಫರ್ಸ್‌ಮತ್ತು ಪ್ರಮೋಷನ್‌ಗಳು ಏನು ಇವೆ ಆ ಬಗ್ಗೆ ಮಾನ್ಯ ಮಂತ್ರಿಗಳು ಈಗಲಾದರೂ ಕೂಡ ತಕ್ಷಣ ಕ್ರಮ ತೆಗೆದುಕೊಳ್ಳುವಂತೆ ಏರ್ಪಾಡು ಮಾಡುತ್ತೀರಾ ಮತ್ತು ಈ ಬಗ್ಗೆ ಅವರಿಗೆ ಪರಿಹಾರ ಒದಗಿಸುವುದಕ್ಕೆ ತಕ್ಷಣ ಕಾರ್ಯಕ್ರಮ ಕೈಗೊಳ್ಳುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೇ, ನಾನು ಈಗಾಗಲೇ ಹೇಳಿದ ಹಾಗೆ ಮೊನ್ನೆ ತಾನೇ ಅಂದರೆ 21ನೇ ಜೂನ್ 1977ರಂದು ಈ ಬಗ್ಗೆ ಒಂದು ಸರ್ಕಾರದ ಆಜ್ಞೆ ಹೊರಡಿಸಿದ್ದೇವೆ.

SRI H. D. DEVEGOWDA.—In that order, you have imposed three conditions. If those conditions are going to be fulfilled then only the quetstion of finalisation of taking over of schools will be completed.

SRI MALLIKARJUNA KHARGE.—Those conditions that are basic have been obtained from the concerned persons and there is no difficulty in it. That is why I said that this matter will be settled within 3-4 weeks. On 22nd June 1977 Government passed an order to bifurcate that gift deed and agreement deed, and within 3-4 weeks that will be settled.

ಶ್ರೀ ಟಿ. ಆರ್. ಶಾಮಣ್ಣ.—ನಾನು ಈಗ ಮತ್ತೊಮ್ಮೆ ಮಾನ್ಯ ಮಂತ್ರಿಗಳನ್ನು ಕೇಳಿ ಕೊಳ್ಳುತ್ತೇನೆ. ಅವರ ಜೊತೆಯಲ್ಲಿ ಕುಳಿತು ಈ ಬಗ್ಗೆ ಚರ್ಚೆ ಮಾಡಿ ಆದಷ್ಟು ಬೇಗ ಅವರ ಬೇಡಿಕೆಗಳನ್ನು ಬಗೆಹರಿಸುವುದಕ್ಕೆ ಕಾರ್ಯಕ್ರಮ ಕೈಗೊಳ್ಳುತ್ತೀರಾ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಅವರ ಡಿಮ್ಯಾಂಡ್‌ಗಳು ಏನು ಇದೆ ಅದನ್ನು ನಾನು ಪೂರ್ತ ಓದಿದ್ದೇನೆ ಮತ್ತು ಅವರಿಗೂ ಸಹ ಹೇಳಿದ್ದೇನೆ. ಅಲ್ಲದೆ ಈಗ ತಾನೇ ವಿರೋಧ ಪಕ್ಷದ ನಾಯಕರು ಮತ್ತು ಶ್ರೀಮಾನ್ ಟಿ. ಆರ್. ಶಾಮಣ್ಣನವರು ಇದರ ಬಗ್ಗೆ ಏನು ಹೇಳಿದರು ಅದನ್ನು ಈಗಾಗಲೇ ಅವರಿಗೆ ಸವಿಸ್ತಾರವಾಗಿ ಹೇಳಿದ್ದೇನೆ. ಆದುದರಿಂದ ಮತ್ತೆ ಅವರನ್ನು ಕರೆಸಿ, ಅವರ ಜೊತೆಯಲ್ಲಿ ಮತ್ತೆ ಚರ್ಚೆ ಮಾಡುವ ಪಶ್ನೆ ಉದ್ಭವಿಸುವುದಿಲ್ಲ.

## Statement by the Minister of State for Animal Husbandry

*re : Strike by the Veterinary College students.*

SRI K. B. SRINIVASULU NAIDU (Shantinagar).—I wish that Minister for Animal Husbandry makes statement on hunger strike by the Veterinary Students.

SRI B. G. BANAKAR (Minister of State for Animal Husbandry).—Madam Speaker, I would like to make the following statement.

Some students of the Veterinary College, Hebbal started a strike by not attending classes and coming in procession to Vidhana Soudha Their main demand is for increased pay for Veterinary Graduates on entry as Veterinary Assistant Surgeons on par with the Medical Graduates with M.B.B.S. Degree. In addition they have also urged implementation of the recommendations of the Naryan Pai Pay Commission and in particular retent on of the posts of Joint Director and Sen or Assistant Director which have been abolished in the recent

Government Orders on the revision of Pay Scales. Student's representatives have been meeting me and the Chief Minister and also the Government Officer to urge acceptance of their demands They were assured that their demands are already being considered by the Officers' Committee appointed by Government to go into the anomalies arising out of the recent pay revision Inspite of this assurance, some of the students have gone on hunger strike. Shri K.H. Hanumegowda & Shri K R.S Naidu M.L As Vice Chancellor. University of Agricultural Sciences, Principal, Veterinary College, and Senior Officers of Government and myself visited the Hospital where the hunger strikers were admitted as in-patients on 24th June 1977. On being assured that their demands are under examination at the highest level, the student leaders broke their fast. The matters raised by them will be examined expeditiously and a decision taken very shortly.

ಶ್ರೀ ಕೆ. ಆರ್ ಶ್ರೀನಿವಾಸಲು ನಾಯಿಡು —ಯಾವಾಗಲೂ ಮಾನ್ಯ ಮಂತ್ರಿಗಳು ಅಕ್ಸೀಪ್ ಕನ್ಸಿಡರೇಷನ್ ಮತ್ತು ಎಕ್ಸ್‌ಪೀಡಿಷಿಯಸ್ ಸ್ಟೆಪ್ಸ್ ಎಂತ ಹೇಳುವುದು ಪೂಮೂರಾಗಿದೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದು ಏನೆಂದರೆ ಆದಷ್ಟು ಬೇಗ ಇದನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ? ಈ ವಿಚಾರ ಅವರಿಗೆ ಗೊತ್ತಿರುವುದರಿಂದ ನಾನು ಇದರ ಬಗ್ಗೆ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಹೇಳುವುದು ಇಷ್ಟೆ. ಹ್ಯೂಮನ್ ಡಾಕ್ಟರ್ಸ್‌ಗೆ 1000 ಸಾವಿರ ರೂಪಾಯಿ ವೇತನ ನೀಡಿದ್ದಾರೆ. ಇವರಿಗೆ ಬರೇ 700 ರೂಪಾಯಿ ವೇತನ ನೀಡಿದ್ದಾರೆ. ಇದು ಬಹಳ ಅನ್ಯಾಯ. ಆದುದರಿಂದ ಅವರ ಬೇಡಿಕೆ ತಮಗೆ ಚೆನ್ನಾಗಿ ಗೊತ್ತಿರುವುದರಿಂದ ಅದನ್ನು ಆದಷ್ಟು ಬೇಗ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

SRI B. G. BANAKAR.—I know that and we are examining it. It will be done as early as possible.

## Budget Estimate for 1977-78

## Demands for grants

*Demand Nos. 30, 31, 48, 49 and 58*

ಶ್ರೀ ಕೆ. ಪ್ರಭಾಕರ್ (ಗ್ರಾಮಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷಣಿಯವರೇ,.....

ಶ್ರೀ ಬಿ. ಪುಟ್ಟಸ್ವಾಮಯ್ಯ.—ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಮೊದಲು ತಮ್ಮಲ್ಲಿ ನನ್ನ ಒಂದು ಅಗ್ರಹಪೂರ್ವಹವಾದಂಥ ಮನವಿ ಏನೆಂದರೆ ಇಂದು ಯಾವ ಸ್ಥಳೀಯ ಸಂಸ್ಥೆಗಳು ಚುನಾಯಿತ ಪ್ರತಿನಿಧಿಗಳ ವಶದಲ್ಲಿ ಇಲ್ಲ, ಆದಕಾರಣ ಈ ಇಲಾಖೆಯ ಬಗ್ಗೆ ಉತ್ತರ ಕೊಡಲು ಮಾನ್ಯ ಮಂತ್ರಿಗಳಿಗೆ ಯಾವ ನೈತಿಕ ಹಕ್ಕು ಇಲ್ಲವೆಂದು ಹೇಳುತ್ತೇನೆ.

ಅಧ್ಯಕ್ಷರು.—ಮಾನ್ಯ ಪುಟ್ಟಸ್ವಾಮಯ್ಯನವರು ಕುಳಿತುಕೊಳ್ಳಬೇಕು.